# ಸತೀಶ್ ಒಳ್ಳೆಯ ದಿನಗಳು!

ನೀನಾಸಂ ಸತೀಶ್ ಕನ್ನಡ ಚಿತ್ರರಂಗ ಕಂಡ ಪ್ರತಿಭಾವಂತ ಕಲಾವಿದರಲ್ಲೊಬ್ಬರು. ನಾಯಕನ ಇಮೇಜ್‌ಗೆ ಜೋತುಬೀಳದೆ ಪ್ರಯೋಗಶೀಲ ಪಾತ್ರಗಳಿಗೆ ಜೀವ ತುಂಬುತ್ತಿದ್ದ ಅಪ್ಪಟ ಕಲಾವಿದ ಸತೀಶ್. 'ರಾಕೆಟ್' ಚಿತ್ರದ ಮೂಲಕ ನಿರ್ಮಾಪಕರೂ ಆಗಿದ್ದ ಅವರು, ನಿರ್ಮಾಣದ ಲೆಕ್ಕಾಚಾರದಲ್ಲಿ ಅಷ್ಟೇನೂ ಯಶಸ್ಸು ಗಳಿಸಿರಲಿಲ್ಲ. 'ರಾಕೆಟ್'ನ ವೈಫಲ್ಯದ ನಂತರ ಸತೀಶ್ ಕೊಂಚ ಮಂಕಾದಂತಿದ್ದರು. ಅವರೀಗ 'ಬ್ಯೂಟಿಫುಲ್ ಮನಸುಗಳು' ಮೂಲಕ ಮತ್ತೆ ಚಿತ್ರರಸಿಕರ ಎದುರು ಬರುತ್ತಿದ್ದಾರೆ.

'ಇದು ನನ್ನ ಮನಸ್ಸನ್ನು ಆವರಿಸಿಕೊಂಡ ಕಥೆ' ಎನ್ನುವುದು ಚಿತ್ರದ ಬಗ್ಗೆ ಸತೀಶ್ ಬಣ್ಣನೆ. ಈ ನಡುವೆ 'ಚಂಬಲ್' ಎನ್ನುವ ಚಿತ್ರವನ್ನು ಅವರು ಒಪ್ಪಿಕೊಂಡಿದ್ದಾರೆ. 'ಪೃಥ್ವಿ'ಯಂಥ ವಿಶಿಷ್ಟ ಚಿತ್ರವನ್ನು ರೂಪಿಸಿದ ಜೇಕಬ್ ವರ್ಗೀಸ್ ಈ ಚಿತ್ರದ ನಿರ್ದೇಶಕರು. ಮತ್ತೆ ಒಳ್ಳೆಯ ಪಾತ್ರಗಳ ಮೂಲಕ ಸತೀಶ್ ಸುದ್ದಿಯಲ್ಲಿರುವುದು ಹಾಗೂ ಅವರಂಥ ಕಲಾವಿದರು ಚಾಲ್ತಿಯಲ್ಲಿರುವುದು ಚಿತ್ರರಂಗದ ಹಿತದೃಷ್ಟಿಯಿಂದ ಒಳ್ಳೆಯದು.

'ಬ್ಯೂಟಿಫುಲ್ ಮನಸುಗಳು' ಜಯತೀರ್ಥ ನಿರ್ದೇಶನದ ಸಿನಿಮಾ. 'ಒಲವೇ ಮಂದಾರ', 'ಟೋನಿ' ಚಿತ್ರಗಳ ಖ್ಯಾತಿಯ ಜಯತೀರ್ಥ ಈ ಸಿನಿಮಾದ ಮೂಲಕ ತಮ್ಮ ಸದಭಿರುಚಿಯ ಚಿತ್ರಗಳ ಪ್ರಯೋಗಶೀಲತೆಯನ್ನು ಮುಂದುವರಿಸಿದಂತಿದ್ದಾರೆ. ಶ್ರುತಿ ಹರಿಹರನ್ ಚಿತ್ರದ ನಾಯಕಿ. ಲೂಸಿಯಾದಲ್ಲಿ ಜೋಡಿಯಾಗಿದ್ದ ಸತೀಶ್–ಶ್ರುತಿ ಪ್ರೇಕ್ಷಕರನ್ನು ಮೋಡಿ ಮಾಡಿತ್ತು. ಈ ಹಳೆಯ ಜೋಡಿ ಮತ್ತೆ ಪ್ರೇಕ್ಷಕರ ಮನಸ್ಸು ಗೆಲ್ಲುವ ಉತ್ಸಾಹದಲ್ಲಿದೆ. ಕಿರಣ್ ಹಂಪಾಪುರ ಛಾಯಾಗ್ರಹಣ ಹಾಗೂ ಬಿ.ಜೆ. ಭರತ್ ಸಂಗೀತ ಚಿತ್ರಕ್ಕಿದೆ.






# ಬಹುಮುಖಿ 'ಚೌಕ'

'ಚೌಕ'ಕ್ಕೆ ಎಷ್ಟು ಮುಖ? ನಾಲ್ಕು ಮುಖ ಎನ್ನುವ ಉತ್ತರ ತಾಂತ್ರಿಕವಾಗಿಯಷ್ಟೇ ಸರಿ. ದ್ವಾರಕೀಶ್ ನಿರ್ಮಾಣದ 'ಚೌಕ' ನಿಜ ಅರ್ಥದಲ್ಲಿ ಬಹುಮುಖಿ ಸಿನಿಮಾ.

ಸಾಮಾನ್ಯವಾಗಿ ಚಿತ್ರವೊಂದಕ್ಕೆ ಓರ್ವ ಛಾಯಾಗ್ರಾಹಕ, ಸಂಗೀತ ನಿರ್ದೇಶಕ ಇರುವುದು ರೂಢಿ. ಆದರೆ, 'ಚೌಕ' ಚಿತ್ರದ ಛಾಯಾಗ್ರಹಣ, ಸಂಗೀತ, ಕಲಾ ನಿರ್ದೇಶನ, ಗೀತರಚನೆ, ಸಂಭಾಷಣೆ ಕ್ಷೇತ್ರಗಳಲ್ಲಿ ತಲಾ ಐವರು ಕೆಲಸ ಮಾಡಿದ್ದಾರೆ. ಇಷ್ಟು ಮಾತ್ರವಲ್ಲ – ವಿಜಯ ರಾಘವೇಂದ್ರ, ಪ್ರೇಮ್, ಪ್ರಜ್ವಲ್ ದೇವರಾಜ್ ಮತ್ತು ದಿಗಂತ್ – ಒಟ್ಟು ನಾಲ್ವರು ನಾಯಕರು ಚಿತ್ರದಲ್ಲಿದ್ದಾರೆ. ನಾಯಕಿಯರೂ ನಾಲ್ವರು! ಐಂದ್ರಿತಾ ರೇ, ಪ್ರಿಯಾಮಣಿ, ಭಾವನ ಹಾಗೂ ದೀಪಾ ಸನ್ನಿಧಿ. ದ್ವಾರಕೀಶ್ ನಿರ್ಮಾಣ ಸಂಸ್ಥೆ 50ನೇ ಸಿನಿಮಾ ಎನ್ನುವುದು 'ಚೌಕ'ದ ಇನ್ನೊಂದು ವಿಶೇಷ. ಹಲವು ವಿಶೇಷಗಳ ಈ ಚಿತ್ರದ ನಿರ್ದೇಶನ ತರುಣ್ ಸುಧೀರ್ ಅವರದು.

'ಚೌಕ' ಚಿತ್ರದ ಗೀತೆಗಳು ಈಗಾಗಲೇ ಜನಪ್ರಿಯತೆ ಗಳಿಸಿವೆ. ಯೋಗರಾಜ್ ಭಟ್ ರಚನೆಯ 'ಅಲ್ಲಾಡ್ಸು ಅಲ್ಲಾಡ್ಸು...' ಹಾಗೂ ನಾಗೇಂದ್ರ ಪ್ರಸಾದ್ ಬರೆದಿರುವ 'ಅಪ್ಪ ಐ ಲವ್ ಯು' ಗೀತೆಗಳು ವರ್ಷದ ಯಶಸ್ವಿ ಗೀತೆಗಳ ಸಾಲಿಗೆ ಸೇರುವ ಸಾಧ್ಯತೆಯಿದೆ.